ದಿನಾಂಕ: 27.12.2022ರಂದು ಬೆಳ್ಗಿಗ್ಗೆ 10.30 ಗಂಟೆಗೆ ಶಿವನಗರ ವಾರ್ಡ್ ನಂ.143 [107] ರಲ್ಲಿ ನೋಡಲ್ ಅಧಿಕಾರಿಯವರಾದ ಶ್ರೀ ಲಿಂಗಣ್ಣ ಗುಂಡಳ್ಳಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರವನ್ನು ದಿನಾಂಕ: 28.12.2022ರಂದು ಸಲ್ಲಿಸುವ ಕುರಿತು.

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಪೂಜಾರಪ್ಪ, ಸಹಾಯಕ ಅಭಿಯಂತರರು, ವಾರ್ಡ್ ನಂ. 107 ಶಿವನಗರ
2. ಶ್ರೀ ಸುಬ್ರಮಣಿ. ಆರ್. ಮೌಲ್ಯ ಮಾಪಕರು
3. ಶ್ರೀ ಶಿವಕುಮಾರಯ್ಯ, ಹಿ.ಆ.ಪ
4. ಡಾ; ಅನಿಲ್‌ಕುಮಾರ್, ಆರೋಗ್ಯಾಧಿಕಾರಿ ನಮ್ಮ ಕ್ಲೀನಿಕ್
5. ಶ್ರೀ ದರ್ಶನ್, ಕೆ.ಆರ್. ಮಾರ್ಷಲ್
6. ಶ್ರೀ ರವಿ. ಸಿ. ಕಂದಾಯ ನಿರೀಕ್ಷಕರು
7. ಶ್ರೀ ಶಿವರಾಂ, ಅರಣ್ಯಾಧಿಕಾರಿ
8. ಶ್ರೀ ಆರ್. ಸುಬ್ರಮಣಿ ಕಂದಾಯ ಅಸೆಸ್ಸರ್
9. ಶ್ರೀ ಮಹೇಶ್,

ಶ್ರೀ ಪೂಜಾರಪ್ಪ, ಸಹಾಯಕ ಕಾರ್ಯದರ್ಶಿಗಳು ಹಾಗೂ ಸಂಚಾಲಕರು, ವಾರ್ಡ್ ನಂ. 143ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಈ ಕೆಳಗಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

1. ಸದರಿ ವಾರ್ಡ್ ಪ್ರದೇಶದಲ್ಲಿ ಈಗಾಗಲೇ ಗುಂಡಿಗಳನ್ನು ಮುಚ್ಚಲಾಗಿದ್ದು, ಇನ್ನುಳಿದ ಗುಂಡಿಗಳನ್ನು ಈಗಾಗಲೇ ದಿನಿನಿತ್ಯ ಜಲ್ಲಿ ಕಲ್ಲಿನ ಮಿಶ್ರಣ ಮತ್ತು ಕೆಲವು ಭಾಗಗಳಲ್ಲಿ ಡಾಂಬರ್ ಮಿಶ್ರಣದಿಂದ ಕೆಲವು ರಸ್ತೆ ಗುಂಡಿಗಳನ್ನು ಸಾರ್ವಜನಿಕರ ದೂರಿನ ಮೇರೆಗೆ ಹಾಗೂ ಸಂಚಾರಿ ಪೋಲಿಸ್ ರವರು ನಮೂದಿಸಿರುವ ಗುಂಡಿಗಳನ್ನು ಹಂತ ಹಂತವಾಗಿ ನಿರ್ವಹಿಸಲಾಗಿರುತ್ತದೆ. ಮುಂದಿನ ದಿನಗಳಲ್ಲಿ ಡಾಂಬರ್ ಮಿಶ್ರಣವನ್ನು ಸಹ ಹಾಕಲಾಗುವುದು.

2. ಪ್ರಸ್ತುತ ಸಾಲಿನಲ್ಲಿ ವಾರ್ಡ್ ನಂ. 143 ವಾರ್ಡ್ ವ್ಯಾಪ್ತಿಯಲ್ಲಿ ಕರ ವಸೂಲಿ 85% ರಿಂದ 95% ರವರೆಗೆ ವಸೂಲಾಗಿದ್ದು, ಇನ್ನುಳಿದಂತಹ ಶೇ. ಕರವಸೂಲಿಯನ್ನು ಪ್ರಸ್ತುತ ಸಾಲಿನಲ್ಲಿಯೇ ಪೂರ್ಣ ಪ್ರಮಾಣದಲ್ಲಿ ಗುರಿ ತಲುಪಲು ಮುಂಜಾಕ್ರಮ ವಹಿಸುತ್ತೇವೆ ಎಂದು ಸಭೆಗೆ ಕಂದಾಯ ಅಧಿಕಾರಿಗಳು ತಿಳಿಸಿರುತ್ತಾರೆ.

3. ಪ್ರಸ್ತುತ ಸಾಲಿನ ವಾರ್ಡ್ ನಂ. 143/ಶಿವನಗರ ಪ್ರದೇಶ ವ್ಯಾಪ್ತಿಯಲ್ಲಿ ಸ್ವಚ್ಛತಾ ಕೆಲಸವು ಉತ್ತಮ ರೀತಿಯಲ್ಲಿ ನಿರ್ವಹಿಸಿದ್ದು, ಇನ್ನು ಮುಂದೆ ಈ ರೀತಿಯಲ್ಲಿ ಮುಂದುವರೆಸಿಕೊಂಡು ಹೋಗುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

4. ದಿನಾಂಕ: 03.12.2022ರಂದು ಅರಣ್ಯ ಅಧಿಕಾರಿಗಳು ಅನುಪಸ್ಥಿತಿಯಲ್ಲಿ ಸದಸ್ಯರು ಮತ್ತು ನೌಕರರು ಸಭೆಯಲ್ಲಿ ಆಯ್ದ ಭಾಗಗಳಲ್ಲಿ ಮರದ ಕೊಂಬೆಗಳು ಒಣಗಿದ್ದು, ಸಂಚರಿಸುವ ಸಾರ್ವಜನಿಕರಿಗೆ ಮತ್ತು ಸಂಚರಿಸುವ ವಾಹನಗಳ ಮೇಲೆ ಬೀಳುವ ಮುನ್ನೆಚ್ಚರಿಕೆಯಿಂದ ಕ್ರಮ ವಹಿಸುವಂತೆ ಸಂಬಂಧಿಸಿದ ಅರಣ್ಯ ಸಿಬ್ಬಂದಿಯವರಿ ಆದೇಶಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

28/12/22

ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 143

ಸಹಿ/-
ಶ್ರೀ ಲಿಂಗಣ್ಣ ಗುಂಡಳ್ಳಿ
ನೋಡಲ್ ಅಧಿಕಾರಿಗಳು

Scanned by CamScanner